# ರಾಮಕೃಷ್ಣ ಸುದ್ದಿ ಸಂಚಯ

ESTD : 1994

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು – 575 003

Web Site: www.ramakrishnacredit.com **Email:** ho@ramakrishnacredit.com

ಸಂಪುಟ : VIII ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ – ಮಾರ್ಚ್ 2023




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಅಧ್ಯಕ್ಷರ ಮಾತು

2022–23ನೇ ಸಾಲಿನಲ್ಲಿ ಸಂಘವು ಒಟ್ಟು ವ್ಯವಹಾರದಲ್ಲಿ ರೂ.145 ಕೋಟಿ ಹೆಚ್ಚಳವನ್ನು ಸಾಧಿಸಿದ್ದು, ಇದು ಸಾರ್ವಕಾಲಿಕ ದಾಖಲೆಯಾಗಿದೆ. ಈ ಅಮೋಘ ಸಾಧನೆಯೊಂದಿಗೆ ಸಂಘವು ವರ್ಷಾಂತ್ಯ 31.03.2023ಕ್ಕೆ ರೂ.835 ಕೋಟಿ (ಗುರಿ ರೂ.825 ಕೋಟಿ) ಮೀರಿದ ಒಟ್ಟು ವ್ಯವಹಾರವನ್ನು ಹೊಂದಿ, Vision 2025ರಂತೆ 31.03.2025ಕ್ಕೆ ರೂ.1000 ಕೋಟಿ ಒಟ್ಟು ವ್ಯವಹಾರದ ಗುರಿಯನ್ನು ಸಾಧಿಸುವತ್ತ ದೃಢ ಹೆಜ್ಜೆಯನ್ನಿಟ್ಟಿದೆ ಎಂದು ತಿಳಿಸಲು ನಾನು ತುಂಬಾ ಹರ್ಷಿಸುತ್ತೇನೆ. 31.03.2023ಕ್ಕೆ ಠೇವಣಾತಿಯು ರೂ.453 ಕೋಟಿಯಾಗಿದ್ದು, ಹಿಂದಿನ ಸಾಲಿಗಿಂತ ರೂ.79 ಕೋಟಿ ವೃದ್ಧಿಯಾಗಿರುತ್ತದೆ. ಅದೇ ರೀತಿ ಸಾಲವು ರೂ.382 ಕೋಟಿಯಾಗಿ ರೂ.66 ಕೋಟಿ ವೃದ್ಧಿಯನ್ನು ಕಂಡಿರುತ್ತದೆ. ಒಟ್ಟು ವ್ಯವಹಾರದಲ್ಲಿ ಆಗಿರುವ ರೂ.145 ಕೋಟಿ ವೃದ್ಧಿಯು ಸಂಘವು ಸ್ಥಾಪನೆಯಾದಂದಿನಿಂದ ಸಾರ್ವಕಾಲಿಕ ದಾಖಲೆಯಾಗಿರುತ್ತದೆ.

ಸಂಘವು ವರ್ಷಾಂತ್ಯ 31.03.2023ಕ್ಕೆ ರೂ.9.83 ಕೋಟಿ ಮೀರಿದ ನಿವ್ವಳ ಲಾಭ ಹಾಗೂ ಕಳೆದ 15 ವರ್ಷಗಳಿಂದ 0% ನಿವ್ವಳ ಅನುತ್ಪಾದಕ ಆಸ್ತಿಯೊಂದಿಗೆ ಎಲ್ಲಾ ವಿಭಾಗದಲ್ಲೂ ಗುರಿ ಮೀರಿದ ಪ್ರಗತಿಯೊಂದಿಗೆ ಅತ್ಯುಜ್ವಲ ಪ್ರಗತಿಯನ್ನು ಸಾಧಿಸಿದೆ.

### 31.03.2023ಕ್ಕೆ ಸಂಘದ ಸಾಧನೆಯ ಪಕ್ಷಿನೋಟ (ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)

| ಕ್ರ ಸಂ. | ಕಾರ್ಯ ವಿಭಾಗ | 31.03.2023ಕ್ಕೆ ಗುರಿ (ರೂ) | ಮಾರ್ಚ್ 2022ಕ್ಕೆ ಇದ್ದಂತೆ (ರೂ) | ಮಾರ್ಚ್ 2023ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|---|
| 1 | ಠೇವಣಾತಿಗಳು | ರೂ.444 ಕೋಟಿ | ರೂ.374 ಕೋಟಿ | ರೂ.453 ಕೋಟಿ | ರೂ.79 ಕೋಟಿ | 21% |
| 2 | ಸಾಲ ಮತ್ತು ಮುಂಗಡ | ರೂ.381 ಕೋಟಿ | ರೂ.316 ಕೋಟಿ | ರೂ.382 ಕೋಟಿ | ರೂ.66 ಕೋಟಿ | 21% |
| 3 | ಒಟ್ಟು ವ್ಯವಹಾರ | ರೂ.825 ಕೋಟಿ | ರೂ.690 ಕೋಟಿ | ರೂ.835 ಕೋಟಿ | ರೂ.145 ಕೋಟಿ | 21% |
| 4 | ನಿವ್ವಳ ಲಾಭ | ರೂ.9.20 ಕೋಟಿ | ರೂ.9.04 ಕೋಟಿ | ರೂ.9.83 ಕೋಟಿ | ರೂ.0.79 ಕೋಟಿ | 9% |
| 5 | ಶೇಕಡಾವಾರು ಅನುತ್ಪಾದಕ ಆಸ್ತಿ | 0.10% | 0.05% | 0.08% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | – | – |

**2022–23ನೇ ಸಾಲಿನವರೆಗಿನ ಸಂಘದ ಸಾಧನೆಯ ವಿಶೇಷತೆಗಳು**

- 5 ಬಾರಿ ರಾಜ್ಯ ಮಟ್ಟದ ಅತ್ಯುತ್ತಮ ಸಹಕಾರಿ ಸಂಘ ಪ್ರಶಸ್ತಿ
- 11 ಬಾರಿ ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನಿಂದ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರಿ ಸಂಘ ಪ್ರಶಸ್ತಿ.
- 2022–23 ಸಾಲಿನಲ್ಲಿ ಸಾರ್ವಕಾಲಿಕ ದಾಖಲೆಯ ರೂ.145 ಕೋಟಿ ವ್ಯವಹಾರ ಹೆಚ್ಚಳ. ಸ್ಥಾಪನೆ 29ನೇ ವರ್ಷದಲ್ಲಿ ರೂ.835 ಕೋಟಿ ಒಟ್ಟು ವ್ಯವಹಾರ (ಠೇವಣಿ ರೂ.453 ಕೋಟಿ + ಸಾಲ ರೂ.382 ಕೋಟಿ) ದಾಖಲಿಸಿದ ಅವಿಭಜಿತ ದ.ಕ ಮತ್ತು ಉಡುಪಿ ಜಿಲ್ಲೆಯ ಪ್ರಥಮ ಕ್ರೆಡಿಟ್ ಸಹಕಾರ ಸಂಘ.
- ದಿನಾಂಕ 31.03.2023ಕ್ಕೆ ಸಂಘದ ನಿವ್ವಳ ಲಾಭ ರೂ.9.83 ಕೋಟಿ ಹಿಂದಿನ ಸಾಲಿಗಿಂತ ರೂ.79 ಲಕ್ಷ ಹೆಚ್ಚಳ. ಲಾಭ ಗಳಿಕೆಯು ನಿರಂತರ ಹೆಚ್ಚಳ.
- Gross NPA ಹೊರಬಾಕಿ ಸಾಲದ 0.08%ಗೆ ಸೀಮಿತ.
- ಕಳೆದ 15 ವರ್ಷಗಳಿಂದ ಅಂದರೆ 2008 ರಿಂದ ಸಂಘದ ನಿವ್ವಳ ಅನುತ್ಪಾದಕ ಆಸ್ತಿಯು ಹೊರಬಾಕಿ ಸಾಲದ ಶೂನ್ಯ ಪ್ರಮಾಣ (0% NPA) ದಲ್ಲಿರುತ್ತದೆ.
- ಸಂಘದ ಕಾರ್ಯವ್ಯಾಪ್ತಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು 25 ಶಾಖೆಗಳನ್ನು ಹೊಂದಿ ಸದಸ್ಯರ ಸೇವೆಯಲ್ಲಿ ಕಳೆದ 29 ವರ್ಷಗಳಿಂದ ಯಶಸ್ವಿಯಾಗಿ ನಿರತವಾಗಿದೆ.
- 36000 ಚ.ಅ. ವಿಸ್ತೀರ್ಣದ ಸುಸಜ್ಜಿತ ಕೇಂದ್ರ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯ ಪ್ರಗತಿ

2022–23ನೇ ಸಾಲಿನ ವರ್ಷಾಂತ್ಯ 31.03.2023ಕ್ಕೆ ಸಂಘವು ಸಾಧಿಸಿರುವ ಗುರಿ ಮೀರಿದ, ಸಾರ್ವಕಾಲಿಕ ದಾಖಲೆಯ ಪ್ರಗತಿಗೆ ಸಹಕರಿಸಿದ, ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಠೇವಣಿದಾರ ಸಾಲಗಾರ ಸದಸ್ಯ ಬಾಂಧವರಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ನನ್ನ ವಿಶೇಷ ಧನ್ಯವಾದಗಳು.

ತಮ್ಮ ಸೇವಾ ದಕ್ಷತೆ ಮತ್ತು ಪರಿಶ್ರಮದಿಂದ ಸಂಘದ ಈ ಪ್ರಗತಿಗೆ ಕೊಡುಗೆಯನ್ನು ನೀಡಿದ ಸಂಘದ ಸಿಬ್ಬಂದಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ Vision 2025 ರ ಗುರಿಯನ್ನು ಮುಂದಿನ ವರ್ಷದಲ್ಲಿ ಸಾಧಿಸುವ ಭರವಸೆಯನ್ನು ವ್ಯಕ್ತಪಡಿಸುತ್ತಾ ಎಲ್ಲರಿಗೂ ಹೊಸ ವಿತ್ತೀಯ ವರ್ಷ 2023–24 ಶುಭಕರವಾಗಲೆಂದು ಹಾರೈಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಸಂಘದ ಕೇಂದ್ರ ಕಛೇರಿಯ ನೂತನ ಕಟ್ಟಡ ನಿರ್ಮಾಣದ ಕಾಮಗಾರಿಯ ಶುಭಾರಂಭ




ಸಂಘದ ಕೇಂದ್ರ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭದ ಮುಹೂರ್ತ ಪೂಜೆಯನ್ನು ದಿನಾಂಕ 24.02.2023ರಂದು ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕಟ್ಟಡ ನಿರ್ಮಾಣದ ಆರ್ಕಿಟೆಕ್ಟ್ ಶ್ರೀ ಸಿ. ಚೇತನ್ ಕಾಮತ್, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಶ್ರೀ ಬಿ. ಪದ್ಮನಾಭ ರೈ, ಸ್ಟ್ರಕ್ಚರಲ್ ಕನ್ಸಲ್ಟೆಂಟ್ ಶ್ರೀ ಅನಿಲ್ ಹೆಗ್ಡೆ ಮತ್ತು ಸಿವಿಲ್ ಕಂಟ್ರಾಕ್ಟರ್ ಶ್ರೀ ಎಚ್. ದಯಾನಂದ ಶೆಟ್ಟಿಯವರನ್ನು ಗೌರವಿಸಲಾಯಿತು.

## ಶುಭಾಶಯಗಳು



ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರಾದ ಸಹಕಾರಿ ರತ್ನ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಸಂಘದ ವತಿಯಿಂದ ಅವರ 74ನೇ ಜನ್ಮದಿನದ ಶುಭಾಶಯ

## ಅಭಿನಂದನೆಗಳು



ದ.ಕ. ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾಗಿ ನೂತನವಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಎಚ್. ರಮೇಶ್‌ರವರನ್ನು ಸಂಘಕ್ಕೆ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಆತ್ಮೀಯವಾಗಿ ಸ್ವಾಗತಿಸಿ ಅಭಿನಂದಿಸಲಾಯಿತು.

## ಸನ್ಮಾನ



ಸಂಘದ ಸುಳ್ಯ ಶಾಖೆಯ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿ 8 ವರ್ಷಗಳ ಕಾಲ ಸ್ತುತ್ಯರ್ಹ ಸೇವೆಯನ್ನು ಸಲ್ಲಿಸಿ ಇದೀಗ ವಿರಮಿಸುತ್ತಿರುವ ಶ್ರೀ ಎನ್. ಜಯಪ್ರಕಾಶ್ ರೈಯವರಿಗೆ ಸಂಘದ ವತಿಯಿಂದ ಆತ್ಮೀಯ ಸನ್ಮಾನ

## ಸಹಕಾರಿ ಕ್ರೀಡೋತ್ಸವ



ದಿನಾಂಕ 22.01.2023ರಂದು ಸಹಕಾರ ಭಾರತಿ ಇವರ ಆಶ್ರಯದಲ್ಲಿ ಜರಗಿದ ಸಹಕಾರಿ ಕ್ರೀಡೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ತಂಡವು ಈ ಕ್ರೀಡಾ ಕೂಟದಲ್ಲಿ ನಮ್ಮ ಸಂಘದ ಸಿಬ್ಬಂದಿಗಳು ಭಾಗವಹಿಸಿ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನವನ್ನು ಗಳಿಸಿರುವರು.

## ಗ್ರಾಹಕ ಸಂಪರ್ಕ ಸಭೆ




ದಿನಾಂಕ 28.01.2023ರಂದು ಮಂಗಳೂರು ಶಾಖೆಯಲ್ಲಿ




ದಿನಾಂಕ 07.02.2023ರಂದು ಹಂಪನಕಟ್ಟೆ ಶಾಖೆಯಲ್ಲಿ




ದಿನಾಂಕ 16.02.2023ರಂದು ಚಿಲಿಂಬಿ ಶಾಖೆಯಲ್ಲಿ



ದಿನಾಂಕ 17.02.2023ರಂದು ಮುಲ್ಕಿ ಶಾಖೆಯಲ್ಲಿ



ದಿನಾಂಕ 21.02.2023ರಂದು ವೆಲೆನ್ಸಿಯಾ ಶಾಖೆಯಲ್ಲಿ




ದಿನಾಂಕ 22.02.2023ರಂದು ಮೂಡಬಿದ್ರಿ ಶಾಖೆಯಲ್ಲಿ

## ಶಿರ್ವ ಶಾಖೆ ಹವಾನಿಯಂತ್ರಣ ವ್ಯವಸ್ಥೆಯ ಉದ್ಘಾಟನೆ ಹಾಗೂ ಗ್ರಾಹಕ ಸಂಪರ್ಕ ಸಭೆ





ಸಂಘದ ಶಿರ್ವ ಶಾಖೆಗೆ ಅಳವಡಿಸಲಾದ ಹವಾನಿಯಂತ್ರಣ ವ್ಯವಸ್ಥೆಯ ಉದ್ಘಾಟನೆಯನ್ನು ವಿದ್ಯಾವರ್ಧಕ ಸಂಘ (ರಿ) ಶಿರ್ವ ಇದರ ಆಡಳಿತಾಧಿಕಾರಿಯಾದ ಪ್ರೊ. ವೈ. ಭಾಸ್ಕರ್ ಶೆಟ್ಟಿಯವರು ನೆರವೇರಿಸಿದರು.

## ಸರ್ವ ಸಿಬ್ಬಂದಿ ಸಮಾವೇಶ







ದಿನಾಂಕ 05.03.2023ರಂದು ಉಡುಪಿ ಜಿಲ್ಲೆ ಮತ್ತು ದ.ಕ. ಜಿಲ್ಲಾ ವ್ಯಾಪ್ತಿಯ ಸಂಘದ ಸರ್ವ ಸಿಬ್ಬಂದಿಗಳ ಸಭೆಗಳನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ನಿರ್ದೇಶಕರುಗಳ ಉಪಸ್ಥಿತಿಯಲ್ಲಿ ಆಯೋಜಿಸಲಾಯಿತು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಕು. ಅಶ್ವಿತಾ ಎಂ. | ಕಡಬ | ಶ್ರೀ ಕರುಣಾಕರ್ ಶೆಟ್ಟಿ | ಸುಳ್ಯ |
| ಶ್ರೀಮತಿ ನಿರ್ಮಲ ಶೆಟ್ಟಿ | ಮೂಡಬಿದ್ರಿ | ಕು. ಲಾವಣ್ಯ | ಉಡುಪಿ ನಗರ |
| ಶ್ರೀಮತಿ ತುಳಸಿ | ಸುರತ್ಕಲ್ | ಶ್ರೀ ಗಣೇಶ್ ಜಿ.ಕೆ. | ಕೇಂದ್ರ ಕಛೇರಿ |
| ಕು. ಅಕ್ಷತ ಕುಮಾರಿ | ಬಿ.ಸಿ.ರೋಡ್ | ಶ್ರೀಮತಿ ಶ್ರೀಲತಾ ಶೆಟ್ಟಿ | ಬೈಂದೂರು |
| ಕು. ಶ್ರುತಿ ಕೆ. | ಬಿ.ಸಿ.ರೋಡ್ | ಶ್ರೀ ಸೇಸಪ್ಪ ನ್ಯಾಕ್ | ಸುಳ್ಯ |
| ಶ್ರೀ ಸೂರಜ್ ಭಂಡಾರಿ | ಸುರತ್ಕಲ್ | ಶ್ರೀ ಕುಂಞ | ಬೆಳ್ತಂಗಡಿ |
| ಶ್ರೀ ಬಾಲಕೃಷ್ಣ ರೈ | ವಿಟ್ಲ | ಶ್ರೀ ಮಹಾಬಲ ಶೆಟ್ಟಿ | ಮಂಗಳೂರು |
| ಶ್ರೀ ಶಮಿತ್ ಕುಮಾರ್ | ಹಂಪನಕಟ್ಟೆ | ಶ್ರೀ ರಮೇಶ್ ಪಿ | ತೊಕ್ಕೊಟ್ಟು |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಕೇಂದ್ರ ಕಛೇರಿ | ಶ್ರೀಮತಿ ಉಷಾ ಬಿ. | ಉಪ್ಪಿನಂಗಡಿ |
| ಶ್ರೀಮತಿ ಜ್ಯೋತಿ | ಕೇಂದ್ರ ಕಛೇರಿ | ಶ್ರೀ ನವೀನ್ ಕುಮಾರ್ | ಕಾರ್ಕಳ |
| ಶ್ರೀ ಶ್ರೀಹರ್ಷ ಡಿಎಸ್. | ಬಿ.ಸಿ.ರೋಡ್ | ಶ್ರೀ ನಾಗರಾಜ್ ಹೆಚ್. | ಬೈಂದೂರು |
| ಶ್ರೀಮತಿ ಮಿಸ್ರಿಯ ಪಿ.ಐ. | ಉಪ್ಪಿನಂಗಡಿ | ಶ್ರೀಮತಿ ಉಷಾ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಜಯಂತಿ ಖಾರ್ವಿ | ಕುಂದಾಪುರ | ಶ್ರೀ ಮೋಹನ್‌ದಾಸ್ ಶೆಟ್ಟಿ | ಉಪ್ಪಿನಂಗಡಿ |
| ಶ್ರೀ ಭರತ್ ಎಸ್. | ಶಿರ್ವ | ಶ್ರೀ ನಾಗರಾಜ್ | ಕುಂದಾಪುರ |
| ಶ್ರೀಮತಿ ಅನಿತಾ ಎ. | ವೆಲೆನ್ಸಿಯಾ | ಶ್ರೀ ಹರೀಶ್ ಮೂಲ್ಯ | ವಿಟ್ಲ |
| | | ಶ್ರೀ ರಾಘವೇಂದ್ರ ರಾವ್ | ಉಡುಪಿ ನಗರ |

## ಅಭಿನಂದನೆಗಳು

- ಸಂಘದ ಮೂಡಬಿದ್ರಿ ಶಾಖೆಯ ಸಿಬ್ಬಂದಿ ಶ್ರೀ ಅಶೋಕ್ ಎಂ.ಕೆ.ರವರು ಗಂಡು ಮಗುವಿನ ತಂದೆಯಾಗಿದ್ದಾರೆ.
- ಸಂಘದ ಸುಳ್ಯ ಶಾಖೆಯ ಸಿಬ್ಬಂದಿ ಶ್ರೀಮತಿ ರಾಧಿಕಾ ರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ.

ಇವರಿಗೆ ಹಾರ್ದಿಕ ಅಭಿನಂದನೆಗಳು.

Private Circulation only

**BOOK POST**

To

..............................................................................

..............................................................................

..............................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.